# ಹುರುಪಿನ ಕಬಡ್ಡಿ ಹುರಿದುಂಬಿಸಿದೆ

## ರಿಶಾ

### ಸ್ಟಾರ್ ಸುವರ್ಣದ 'ವರಲಕ್ಷ್ಮಿ ಸ್ಟೋರ್ಸ್'ನ ರಕ್ಷಿತಾ



◆ **ರಕ್ಷಿತಾಳಿಗೇಕೆ ಎರಡು ಮುಖ?**

ಮದುವೆಗೂ ಮುಂಚಿನ ರಕ್ಷಿತಾ ಬೇರೆ, ಮದುವೆಯಾದ ನಂತರದ ರಕ್ಷಿತಾಳೇ ಬೇರೆ. ಅವಳಿಗೆ ಎರಡು ಶೇಡ್ ಬರಲು ಕಾರಣ ಏನೆಂದರೆ ಮೆಚ್ಚಿದ ಹುಡುಗನನ್ನು ಬಿಟ್ಟು ಇಷ್ಟ ಇಲ್ಲದ ಹುಡುಗನನ್ನು ಮದುವೆ ಆಗಿದ್ದಾಳೆ. ಮದುವೆಗೂ ಮುಂಚೆ ತುಂಬ ಜೋಷ್‌ನಿಂದ ಇದ್ದಳು. ಆಕೆಗೆ ತನ್ನ ಮಾವನನ್ನೇ ಮದುವೆ ಆಗಬೇಕು ಎನ್ನುವ ಬಯಕೆ ಇರುತ್ತದೆ. ಆಕೆಯ ಆಸೆಯಂತೆ ಹಸೆ ಏರುವ ದಿನವೂ ಬರುತ್ತದೆ. ಆದರೆ ಅವನು ಬೇರೆ ಹುಡುಗಿಯನ್ನು ಪ್ರೀತಿ ಮಾಡುತ್ತಿರುತ್ತಾನೆ. ಅವನ ಪ್ರೇಯಸಿ ಮದುವೆ ಮಂಟಪಕ್ಕೆ ಬಂದು ಮದುವೆಯನ್ನು ತಡೆದು ತಾನು ಮದುವೆ ಆಗುತ್ತಾಳೆ. ಅದು ರಕ್ಷಿತಾಳ ಮೇಲೆ ಬಲವಾದ ಪೆಟ್ಟುಕೊಡುತ್ತದೆ. ನಂತರ ಅನಿವಾರ್ಯವಾಗಿ ಮಾವನ ತಮ್ಮನನ್ನು ಮದುವೆ ಆಗುತ್ತೇನೆ. ಆ ಮನೆಯ ಹಿರಿಯ ಸೊಸೆಗೆ ತನ್ನ ಎರಡನೇ ಮೈದುನ ಪ್ರೀತಿಸುವ ಸಂಗತಿ ಗೊತ್ತಿದ್ದರೂ ಆ ಸಂಗತಿಯನ್ನು ಗೌಪ್ಯವಾಗಿ ಇಟ್ಟುಕೊಂಡಿರುತ್ತಾರೆ. ಅವರ ಬಗ್ಗೆ ಸಹಜವಾಗಿ ಕೋಪ ಇದೆ. ಈಗ ತುಂಬ ಪ್ರಬುದ್ಧ ಗುಣವನ್ನು ಪ್ರದರ್ಶಿಸುತ್ತಿದ್ದಾಳೆ. ಕೈ ಹಿಡಿದ ಗಂಡನ ವೇಷಭೂಷಣದ ಅಭಿರುಚಿ ಆಕೆಗೆ ಇಷ್ಟ ಆಗಲ್ಲ. ಆತ ಓದಿಲ್ಲ, ಬರೆದಿಲ್ಲ ಎನ್ನುವ ಕೊರಗಿನ ನಡುವೆ ಮನೆಗೆ ಹೊಂದಿಕೊಳ್ಳುವ ಕುಟುಂಬದ ಸದಸ್ಯರಲ್ಲಿ ಒಂದಾಗುವ ನಿಟ್ಟಿನಲ್ಲಿ ಪ್ರಯತ್ನ ಸಾಗಿದೆ.

◆ **ನಿಮಗೆ ಯಾವ ರೀತಿಯ ಪಾತ್ರ ಇಷ್ಟ ಆಗುತ್ತವೆ?**

ಪಾತ್ರದ ಗುಣ– ಅವಗುಣಗಳು ಮುಖ್ಯ ಆಗುವುದಿಲ್ಲ. ಕಥೆ ಚೆನ್ನಾಗಿರಬೇಕು ಎನ್ನುವುದು ಮೊದಲ ಆಯ್ಕೆ. 'ಕೃಷ್ಣನ ಲವ್ ಸ್ಟೋರಿ'ಯಲ್ಲಿ ರಾಧಿಕಾ ಪಂಡಿತ್ ನಿರ್ವಹಿಸಿದಂತಹ ಪಾತ್ರ ಸಿಕ್ಕರೆ ತುಂಬ ಇಷ್ಟ. ಪಾತ್ರ ಪಾಸಿಟಿವ್ ಇರಬಹುದು ಇಲ್ಲವೇ ನೆಗೆಟಿವ್ ಇರಬಹುದು ಯಾವ ರೀತಿಯ ಪಾತ್ರವಾದರೂ ಸೈ. ಈಗ ನಿರ್ವಹಿಸುತ್ತಿರುವ ಪಾತ್ರ ಬುದ್ಧಿವಂತೆಯ ಪಾತ್ರ ಇಂತಹ ಪಾತ್ರಗಳೂ ಇಷ್ಟ. ಭಿನ್ನ ಭಿನ್ನ ಬಣ್ಣಗಳಿಗೆ ಪಾತ್ರವಾಗಬೇಕು.

◆ **ಪಾತ್ರಗಳ ಬಣ್ಣದ ಹಿಂದಿರುವ ರಿಶಾ ಹೇಗಿದ್ದಾರೆ? ಅವರಿಗೆ ಬಣ್ಣದ ಮೋಹ ಹುಟ್ಟಿದ್ದಾದರೂ ಹೇಗೆ?**

ಒಂದು ರೀತಿಯಲ್ಲಿ ರಕ್ಷಿತಾಳ ಮದುವೆ ಮುಂಚಿನ ದಿನಗಳಂತೆ ನಾನಿದ್ದೇನೆ. ನಮ್ಮ ಊರು ಚಿತ್ರದುರ್ಗ. ಕಳೆದ ಮೂರು ವರ್ಷಗಳ ಹಿಂದೆ ನನ್ನ ಅಭಿಲಾಷೆಯಂತೆ ನಮ್ಮ ಮನೆಯನ್ನು ಬೆಂಗಳೂರಿಗೆ ವರ್ಗಾಯಿಸಿದ್ದೇವೆ. ಅಪ್ಪ ನಿಜಗುಣ, ಅಮ್ಮ ಗಂಗಮ್ಮ ಗೃಹಿಣಿ. ಅಪ್ಪ ವ್ಯಾಪಾರಸ್ಥರು. ಅಪ್ಪನಿಗೆ ನಾಟಕ– ಸೀರಿಯಲ್ ಅಂದರೆ ತುಂಬ ಇಷ್ಟ. ಅವರಿಗೆ ತಮ್ಮ ಮಗಳು ನಟಿ ಆಗಬೇಕು ಎನ್ನುವ ಆಶೆ. ನನ್ನ ತಮ್ಮನ ಕನಸು ಕೂಡ ಅದೇ ಆಗಿತ್ತು. ಅವರ ಒತ್ತಾಸೆಯಂತೆ ನಾನು ನಟಿಯಾಗಿದ್ದೇನೆ.

ಬೆಂಗಳೂರಿಗೆ ಬಂದಾಗ ಏನು ಮಾಡಬೇಕು ಎನ್ನುವುದು ಗೊತ್ತಿರಲಿಲ್ಲ. ಪರಿಚಯಸ್ಥರ ಮೂಲಕ 'ಕಲಾತ್ಮಕ' ರಂಗ ತಂಡದಲ್ಲಿ ಒಂದು ವರ್ಷ ನಾಟಕಗಳನ್ನು ಆಡಿದೆ. ಇದು ನನ್ನ ಮೊದಲ ಸೀರಿಯಲ್. ರಂಗಚಟುವಟಿಕೆ ಮಾಡುತ್ತಲೇ ಆಡಿಷನ್‌ಗಳನ್ನು ನೀಡುತ್ತಿದ್ದೆ. ಈ ಧಾರಾವಾಹಿಗೆ ಸುಮಂತ್ ಪರಿಚಯಿಸಿದರು. ನನಗೆ ಪಾತ್ರ ಸಿಗುತ್ತದೆ ಎನ್ನುವ ಭರವಸೆ ಇರಲಿಲ್ಲ. ಈ ಪಾತ್ರಕ್ಕೆ ನಾನೇ ಸೂಕ್ತ ಎಂದು ನನ್ನನ್ನು ಆಯ್ಕೆ ಮಾಡಿದರು. ಸದ್ಯ ನಾನು ನಟಿಯಾಗಿಯೇ ಮುಂದುವರಿಯಬೇಕು ಎಂದುಕೊಂಡಿದ್ದೇನೆ. ಈಗ ಇದೊಂದೇ ಪಾತ್ರವನ್ನು ಮಾತ್ರ ತಲೆಯಲ್ಲಿ ತುಂಬಿಕೊಂಡಿದ್ದೇನೆ. ಏಕೆಂದರೆ ಇದರ ಕೆಲವೇ ಸಾಕಷ್ಟು ಇದೆ. ಮುಂದೆ ಅವಕಾಶ ಸಿಕ್ಕರೆ ಸಿನಿಮಾಗಳನ್ನೂ ಮಾಡಬೇಕು. ಒಳ್ಳೆಯ ನಟ್ಟಿಯಾಗಬೇಕು ಅಂದರೆ ಮೊದಲು ಕಲಿಯಬೇಕು. ಈಗ ಕಲಿಯುತ್ತಿದ್ದೇನೆ. ಯಾವುದೇ ಪಾತ್ರವನ್ನು ನಾನು ಆಯ್ಕೆ ಮಾಡುವುದಾದರೆ ಅದಕ್ಕೆ ಕಥೆ ಇಷ್ಟ ಆಗಬೇಕು.

◆ **ಸೀರಿಯಲ್ ಜೀವನ ಹೇಗೆನಿಸುತ್ತದೆ?**

ಈಗಷ್ಟೇ ಆರಂಭವಾಗಿದೆ. ಸೀರಿಯಲ್ ಹೇಗಿರುತ್ತದೆ ಎನ್ನುವುದು ಗೊತ್ತಿರಲಿಲ್ಲ. ಪ್ರವೇಶ ಮಾಡಿದ ನಂತರವೇ ಗೊತ್ತಾಗಿದೆ. ತುಂಬ ಒಳ್ಳೆಯ ಅನುಭವ. ಈ ಸೀರಿಯಲ್ ತಂಡದ ಜೊತೆ ಇರುವುದು ಮನೆಯಲ್ಲಿ ಇದ್ದಷ್ಟೇ ಖುಷಿಯನ್ನು ಕೊಡುತ್ತದೆ. ಒಂದೇ ಬೇಸರ ಅಂದರೆ ನಿದ್ದೆ ಕಡಿಮೆ ಆಗಿದೆ. ಕೆಲಸ ಮಾತ್ರ ಒತ್ತಡದಿಂದ ಕೂಡಿದೆ. ಸೆಟ್‌ಗೆ ಬಂದು ಸೇರಿದ ತಕ್ಷಣ ಅದೆಲ್ಲ ಮರೆತು ಹೋಗುತ್ತದೆ. ಈ ಧಾರಾವಾಯಿಗೆ ಬಹುಮುಖ್ಯವಾದ ತಿರುವು ದೊರೆತಿದೆ. ವೀರಭದ್ರ ಎನ್ನುವ ಪಾತ್ರಕ್ಕೆ ಒಂದು ಸವಾಲು ಎದುರಾಗಿದೆ. ಅದು ಕ್ರೀಡೆಯೊಂದರಲ್ಲಿ ಜಯಿಸಬೇಕಾಗಿದೆ. ಆ ಸಂಬಂಧ ಕಬಡ್ಡಿ ಅಂಕಣ ಸಿದ್ಧವಾಗಿದೆ. ಆಟಕ್ಕಾಗಿ ಸ್ಟಾರ್ ಸುವರ್ಣದ 'ಮುದ್ದುಲಕ್ಷ್ಮಿ', 'ಅರಮನೆ ಗಿಳಿ', 'ಪ್ರೇಮಲೋಕ' ಕಲಾವಿದರ ತಂಡವೂ ಕಬಡ್ಡಿ ಸಂಗ್ರಾಮದಲ್ಲಿ ಭಾಗಿಯಾಗಿವೆ. ನಾಲ್ಕು ಧಾರಾವಾಹಿಗಳು ಸೇರಿ ಒಂದು ಕಥೆಯನ್ನು ಮುಂದುವರಿಸುತ್ತಿರುವುದು ಬೇರೆಯದೇ ಅನುಭವವನ್ನು ನೀಡುತ್ತಿದೆ. ಎಲ್ಲ ತಂಡದ ಕಲಾವಿದರ ಜೊತೆ ಬೆರೆಯುವ ಅವಕಾಶವೂ ಸಿಕ್ಕಿದೆ.

■ **ರಾಘವೇಂದ್ರ ಕೆ.**